ಮದ, ಅಧಿಕಾರದ ಸೊಕ್ಕು, ಅದನ್ನು ಬಿಟ್ಟ ಏನ ಅದ ನಿನ್ನಲ್ಲಿ, ನೋಡು, ಇದೆಲ್ಲ ಆಗದ ಮಾತ. ಸುಮ್ನ ಹೋಗಿ ಬಿಡು. ಹೆಚ್ಚಿಗೆ ಮಾತ ಬ್ಯಾಡ" ಎಂದು ಹತ್ತಿರಕ್ಕೂ ಸೇರಿಸಿಕೊಳ್ಳದೇ ಹೋಗುವಂತೆ ಮಾಡಿದಾಗ ಪಂಚಾಕ್ಷರಿಗೆ ಮೈಯೆಲ್ಲ ಸಿಟ್ಟು. ಆದ್ರ ಎಲೆಕ್ಷನ್ ವೇಳೆ. ಏನೂ ಮಾಡಲಿಕ್ಕೆ ಆಗುದಿಲ್ಲ. ಆದರೆ, ಪರಪ್ಪಜ್ಜ ಚುನಾವಣೆ ವೇಳೆ ಯಾರಿಗೂ ಬೆಂಬಲ ನೀಡದೆ ತಟಸ್ಥರಾಗಿ ಉಳಿದ ಕಾರಣವೋ ಅಥವಾ ಎಲೆಕ್ಷನ್‌ದಲ್ಲಿ ಅದೇನು ಕರಾಮತ್ತು ಮಾಡಿದನೋ, ಜಯಶಾಲಿಯಾಗಿ ಪಂಚಾಯತಿ ಅಧ್ಯಕ್ಷನಾದ.

ಪಂಚಾಕ್ಷರಿ ಚುನಾವಣೆ ಗೆದ್ದ ನಂತರ ಅವನು ಪರಪ್ಪಜ್ಜನ ಬಗ್ಗೆ ವಿಚಾರ ಮಾಡಲಿಕ್ಕೆ ಶುರು ಮಾಡಿದ. ಅಧಿಕಾರದ ಮದ ತುಂಬಿದ ತಲೆಯಲ್ಲಿ ಸೇಡಿನ ವಾಂಛೆ ಹೆಡೆಯೆತ್ತಿತ್ತು. ಆದರೆ, ಹೇಗೆ? ಅವರಿಗೇನು ಹೆಂಡತಿಯೇ, ಮಕ್ಕಳೇ. ಪಂಚಾಕ್ಷರಿಯ ತಲೆಯಲ್ಲಿ ಕೀಟ ಕೊರೆಯಹತ್ತಿತು. ಕೊನೆಗೂ ಆತನಿಗೆ ಹೊಳೆದದ್ದು ಪರಪ್ಪಜ್ಜನಿಗೆ ಪ್ರಾಣವಾಗಿದ್ದ ಆಲದ ಮರ. ಅದನ್ನೇ ಇಲ್ಲವಾಗಿಸಿದರೆ? ಅದಕ್ಕೊಂದು ಕಾರಣ ಹುಡುಕಿದನು. ಅದೇ ಮಂಗಲ ಭವನ ನಿರ್ಮಾಣ. ಅದನ್ನು ಕಟ್ಟಿಸುವುದೆಂದರೆ ಎಲ್ಲ ಜನರು ಒಪ್ಪುತ್ತಾರೆಂದು ಅರಿತುಕೊಂಡು, ಊರಲ್ಲಿ ಕೆಲವರಿಗೆ ದುಡ್ಡು ಕೊಟ್ಟು ತನ್ನಂತೆಯೇ ಮಾತಾಡುವಂತೆ ಏರ್ಪಾಡು ಮಾಡಿಕೊಂಡ. ಇದೇ ವಿಷಯವಾಗಿ ಚಾವಡಿಯಲ್ಲಿ ಆಲದ ಕಟ್ಟೆ ಮೇಲೆ ಹಲವಾರು ಸಭೆಗಳನ್ನು ಮಾಡಿ ವಾದ ವಿವಾದಗಳು ತಲೆದೋರಿ ಅನೇಕ ಅಧಿಕಾರಿಗಳು ಬಂದು ಹೋಗಲು ಕಾರಣವಾಗಿತ್ತು. ನಾಲ್ಕು ದಿನಕ್ಕೊಮ್ಮೆ ಈ ಸುದ್ದಿ ಎತ್ತಿ ಪರಪ್ಪಜ್ಜನ ನೆಮ್ಮದಿ ಹಾಳು ಮಾಡುತ್ತಿದ್ದ. ಅದಕ್ಕೆ ವಿಶ್ವನಿಗೆ ಬರಲು ಕರೆ ಕಳಿಸಿದ್ದು.

★★★

ಶಂಕರನೊಂದಿಗೆ ವಿಶ್ವ ಬಂದಿಳಿದಾಗ ಪರಪ್ಪಜ್ಜ ಆಲದ ಕಟ್ಟೆ ಮೇಲೆ ಮಲಗಿದ್ದರು. ಪಕ್ಕದಲ್ಲಿ ನಾಲ್ಕಾರು ಜನ ಕುಳಿತಿದ್ದರು. ವಿಶ್ವ ಅವರನ್ನು ನೋಡಿದಾಗ ಹೈರಾಣಾದಂತೆ ಕಂಡುಬಂದರು. ವಿಶ್ವನ ಧ್ವನಿ ಕೇಳಿ ಎದ್ದು ಕುಳಿತಾಗ ಅವರ ಕಾಲಿಗೆ ನಮಸ್ಕರಿಸಿ ಕೇಳಿದ, "ಯಾಕ್ರಿ, ಅಜ್ಜ, ಇಷ್ಟೊಂದು ಸೊರಗಿರಿ. ಮಾರಿ ತುಂಬ ಬರಿ ಎಲಬುಗಳು ಕಾಣ್ತಾವ. ಹೆಂಗ ಇದ್ದವ್ರು ಹೆಂಗ ಆಗಿರಿ".

"ವಿಶ್ವ, ನಾನೇನು ಬಿದ್ದೋಗ ಮರ. ಆದ್ರ ಇಲ್ಲಿ ದೇವ್ರಂಗ ನಿಂತದ, ಈ ಮರ ಉಳಿಸಿರಿ. ದೇವಸ್ಥಾನದಂತಹ ಈ ಕಟ್ಟಿ ಉಳಿಸಿರಿ."

ಅದಕ್ಕೆ ವಿಶ್ವ, "ಅಜ್ಜಾರ, ನೀವ ಯಾಕ ಅಷ್ಟೊಂದು ನಿರಾಶಾ ಆಗಿರಿ. ಈ ಮರ, ಈ ಕಟ್ಟಿ ನಿಮಗೆಷ್ಟು ಸಂಬಂಧದನೋ ಅಷ್ಟ ಸಂಬಂಧ ನಮಗೂ ಅದ. ಯಾಕಂದ್ರ ನಾವು ನಮ್ಮ ಬಾಲ್ಯನ ಈ ಕಟ್ಟಿ ಮ್ಯಾಲೆ ಕಳಿದಿವಿ. ಮದಲ ನೀವ ನಡ್ರಿ. ಹೊಟ್ಟೆಗೆ ಏನಾರ ತಗೊಳ್ರಿ" ಎಂದಾಗ ಪಕ್ಕದಲ್ಲಿದ್ದ ವಿಶ್ವನ ತಂದೆ ಚೆನ್ನಬಸವಯ್ಯ, "ನೋಡಪಾ, ಮನ್ನೆ ಹಾಕ್ಯಾಟ ಆದ ದಿನದಿಂದಾನೂ ಒಂದ ಅಗಳ ಬಾಯಿಗೆ ಹಾಕಿಲ್ಲ. ಅದರಾಗ ನಿನ್ನೆ ಪಂಚಾಯತಿ ಮೀಟಿಂಗದಾಗ ಮರ ಕಡಿಬೇಕಂತ ಠರಾವ ಪಾಸ ಆದ ಸುದ್ದಿ ಕೇಳಿ ಹಗಲು ರಾತ್ರಿ ಮರ ಉಳಿಸಿರಿ, ಕಟ್ಟೆ ಉಳಿಸಿರಿ ಅಂತ ಒಂದ ಸಮ ಬಡಬಡಸಾಕ ಹತ್ಯಾರ" ಅಂದ.

"ನಡ್ರಿ ಅಜ್ಜಾರ. ಠರಾವ ಏನ ಪಾಸ್ ಆಗಲಿ, ಈ ಮರಾಕ ಒಂದ ಏಟು ಬೀಳದಂಗ ನೋಡ್ಕೊಳ್ಳೊ ಜವಾಬ್ದಾರಿ ನಂದದ, ನೀವ ನಡರಿ" ಎಂದು ಅವರನ್ನು ಎಬ್ಬಿಸಿ ಮನೆಗೆ ಕರೆದುಕೊಂಡು ಹೋದರು.

★★★

ಮರುದಿನ ಮುಂಜಾನೆ ಎಲ್ಲಾರು ಕಟ್ಟೆಯ ಮೇಲೆ ಕುಳಿತಿದ್ದಾಗ ಅವರ ಮುಂದೆಯೇ ನಾಲ್ಕಾರು ಕಾರುಗಳು ದೂಳೆಬ್ಬಿಸಿ ಅಗಸಿ ದಾಟಿ ಪಂಚಾಯತಿ ಬಿಲ್ಡಿಂಗ್‌ಗೆ ಹೋಗಿ ನಿಂತವು. ಸ್ವಲ್ಪ ಸಮಯದ ನಂತರ ವಾಲೀಕಾರ ಇವರಿದ್ದಲ್ಲಿಗೆ ಬಂದು, "ಅಜ್ಜಾರ, ಚೇರಮನ್ನರು, ಮೆಂಬರ್ರೂ, ಸೆಕ್ರೆಟರಿ

